**2ನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

| | | |
|---|---|---|
| ಹೆಸರು | : | ಶೋಭ |
| ಗಂಡನ ಹೆಸರು | : | ಸುರೇಶ್ ಸಿಂಗ್ |
| ವರ್ಷ | : | 40ವರ್ಷ |
| ಉದ್ಯೋಗ | : | ಪಾನಿಪುರಿ ಅಂಗಡಿ ವ್ಯಾಪಾರ |
| ಸ್ಥಳ | : | ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ 19.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಃ- ಆರೋಪಿ ಪರ ವಕೀಲರಿಂದಃ-**

ನನ್ನ ಗಂಡ ಮತ್ತು ಪಿರ್ಯಾದಿಯು ಹಣಕಾಸಿನ ವ್ಯವಹಾರವನ್ನು ಮಾಡಿಕೊಂಡಿರುತ್ತಾರೆ. ಅದರ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ನನ್ನ ಗಂಡ ಸುರೇಶ್ ಅವರು ನನ್ನ ಚೆಕ್ ಬೇಕು ಎಂದು ಕೇಳಿದರು, ಆ ಕಾರಣ ನಾನು ಭದ್ರತೆಗಾಗಿ ಚೆಕ್ ಅನ್ನು ಕೊಟ್ಟೆ. ಒಂದು ದಿನ ಅಂಗಡಿಯ ಬಳಿ ಗಲಾಟೆ ಮಾಡಿಕೊಳ್ಳುತ್ತಿದ್ದರು. ಆಗ ನಮ್ಮ ತಂದೆ ಆಸ್ತಿ ಮಾರಾಟ ಮಾಡಿದಂತಹ ಹಣವನ್ನು ತಂದು ವಾಪಸ್ಸು ಕೊಟ್ಟಿರುತ್ತೇವೆ. ಹಣವನ್ನು ನಾನು, ನನ್ನ ಗಂಡ, ರವಿಕುಮಾರ್ ಅವರು ನಮ್ಮ ಮನೆಯ ಸಿಗ್ನಲ್ ಬಳಿ ಇರುವಂತಹ ಆರ್ ಬಿಐ ಲೇ ಔಟಿನ ಬಳಿ ಇರುವ ಆದಿತ್ಯ ಹೊಟೇಲ್‌ನಲ್ಲಿ ಕೊಟ್ಟಿರುತ್ತೇವೆ. ಪಿರ್ಯಾದಿಗೆ ಸೇರಬೇಕಾದ ಎಲ್ಲಾ ಹಣವನ್ನು ವಾಪಸ್ಸು ಕೊಟ್ಟುಬಿಟ್ಟಿರುತ್ತೇವೆ.

2. ನಾವು ಭದ್ರತೆಗಾಗಿ ಕೊಟ್ಟಿರುವಂತಹ ಚೆಕ್ ಗಳನ್ನು ವಾಪಸ್ಸು ಕೇಳಿರುತ್ತೇವೆ. ಅವರು ಇನ್ನು ಬಡ್ಡಿ ಬಾಕಿ ಇದೆ. ತದನಂತರ ಕೊಡುತ್ತೇನೆ ಎಂದದು ತಿಳಿಸಿರುತ್ತಾರೆ. ಚೆಕ್ ಅನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಕೋಣನಕುಂಟೆ ಪೊಲೀಸರು ಮನೆಯ ಬಳಿ ಬಂದಾಗ ಗೊತ್ತಾಗಿರುತ್ತದೆ. ನಾನು ಎಲ್ಲಾ ಹಣವನ್ನು ಪಿರ್ಯಾದಿಗೆ

ಕೊಟ್ಟು ಬಿಟ್ಟಿದ್ದೇನೆ. ಆ ಕಾರಣ ನನ್ನನ್ನು ಈ ಪ್ರಕರಣದಿಂದ ದೋಷಮುಕ್ತನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ವಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**